ಮೇಲಿನ ಕಸ್ಟಮ್ ಡ್ಯೂಟಿಯನ್ನು ಶೇ. 10ರಿಂದ 20ಕ್ಕೆ ಹೆಚ್ಚಿಸಲಾಗಿದೆ. ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಸಲುವಾಗಿ ಮತ್ತು ಜವಳಿ ರಫ್ತನ್ನು ಉತ್ತೇಜಿಸಲು 31 ಶತಕೋಟಿ ಡಾಲರ್‌ಗಳ ವಿಶೇಷ ಪ್ಯಾಕೇಜನ್ನು ಘೋಷಿಸಿ, 11 ಬಿಲಿಯನ್ ಡಾಲರ್‌ಗಳ ವಿದೇಶಿ ನೇರ ಬಂಡವಾಳವನ್ನು ಈ ಸಾಲಿಗೆ ಎದುರು ನೋಡುತ್ತಿದೆ.

ಕ್ರೋಡೀಕೃತ ಜವಳಿ ಪಾರ್ಕ್ ಯೋಜನೆಯಡಿ 59 ಹೊಸ ಟೆಕ್ಸ್‌ಟೈಲ್ ಪಾರ್ಕ್‌ಗಳ ಸ್ಥಾಪನೆಗೆ ಮುಂದಾಗಿದ್ದು ಈಗಾಗಲೇ 22ನ್ನು ಪೂರ್ತಿಗೊಳಿಸಲಾಗಿದೆ; ಅವು ಕಾರ್ಯನಿರತವಾಗಿವೆ. 2015ರಲ್ಲಿ 8 ದಶಲಕ್ಷದಷ್ಟಿದ್ದ ಕಾರ್ಮಿಕರ ಸಂಖ್ಯೆ ಈಗ 45 ದಶಲಕ್ಷಕ್ಕೇರಿದೆ. ದೇಶದ 16 ರಾಜ್ಯಗಳು ಕೇಂದ್ರ ಸರ್ಕಾರದ ಕೌಶಲ್ಯ ವೃದ್ಧಿ ಯೋಜನೆಗೆ ಪಾಲುದಾರರಾಗಲು ಒಪ್ಪಿದ್ದು ನಾಲ್ಕು ಲಕ್ಷ ಕೆಲಸಗಾರರಿಗೆ ಕೌಶಲ್ಯ ತರಬೇತಿ ನೀಡಲಿವೆ. ನಮ್ಮ ಮಟ್ಟಿಗೆ ಹೇಳುವುದಾದರೆ ದೇಶೀಯ ಮತ್ತು ಅಂತರರಾಷ್ಟ್ರೀಯ ರಫ್ತು ಮಾರುಕಟ್ಟೆಗಳೆರಡೂ ಸದೃಢವಾಗಿದ್ದು ಜವಳಿ ಉದ್ಯಮ ಸುಸ್ಥಿತಿಯಲ್ಲಿದೆ. ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳಾದ ಮಾರ್ಕ್ಸ್ ಅಂಡ್ ಸ್ಪೆನ್ಸರ್, ಗೆಸ್ ಮತ್ತು ನೆಕ್ಸ್ಟ್‌ಗಳು ನಮ್ಮ ಮಾರುಕಟ್ಟೆ ಪ್ರವೇಶಿಸಿರುವುದರಿಂದ ಚಿಲ್ಲರೆ ವ್ಯಾಪಾರವೂ ಏರುಗತಿಯಲ್ಲಿದೆ. ಅಸಂಘಟಿತ ವಲಯದ ಕೈಮಗ್ಗ, ಕರಕುಶಲ ಮತ್ತು ರೇಷ್ಮೆ ತಯಾರಿಕೆ ಮತ್ತು ಸಂಘಟಿತ ವಲಯಗಳೆರಡನ್ನೂ ಹೊಂದಿರುವ ಭಾರತ ವಾರ್ಷಿಕ 37 ಶತಕೋಟಿ ಡಾಲರ್‌ನ ರಫ್ತು ವಹಿವಾಟು ಹೊಂದಿದ್ದು, ವಿಶ್ವದ ಹೆಚ್ಚು ರಫ್ತು ಮಾಡುವ ಮೊದಲ ಹತ್ತು ದೇಶಗಳ ಪೈಕಿ 5ನೇ ಸ್ಥಾನದಲ್ಲಿದೆ.

ಜಗತ್ತಿನಲ್ಲೇ ಅತಿಹೆಚ್ಚು ಜವಳಿ ಉತ್ಪಾದನೆ ಮತ್ತು ರಫ್ತುಮಾಡುವ ದೇಶಗಳ ಪೈಕಿ ಪ್ರಥಮ ಸ್ಥಾನದಲ್ಲಿರುವ ಚೀನಾ, 266 ಶತಕೋಟಿ ಡಾಲರ್‌ಗಳ ವಹಿವಾಟು ಹೊಂದಿದೆ. ಕಡಿಮೆ ಖರ್ಚಿನಲ್ಲಿ ಉತ್ಪಾದನೆ, ಸಮರ್ಥ ತಂತ್ರಜ್ಞಾನ, ಉತ್ತಮ ಗುಣಮಟ್ಟದ ಕಚ್ಚಾವಸ್ತುಗಳ ಲಭ್ಯತೆಯಿಂದಾಗಿ ವಿಶ್ವದಲ್ಲೇ ಜವಳಿ ಉದ್ಯಮದಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿರುವ ಚೀನಾ ಇತರ ದೇಶಗಳಿಗಿಂತ ಎಂಟ್ಟತ್ತು ಪಾಲು ಮುಂದಿದೆ. ವಿಶ್ವದ ದೊಡ್ಡಣ್ಣ ಎನಿಸಿಕೊಂಡಿರುವ ಅಮೆರಿಕದ ರಫ್ತಿನ ಪಾಲು ಕೇವಲ 27 ದಶಕೋಟಿ ಡಾಲರ್‌ಗಳಿಷ್ಟದ್ದು ಎಂಟನೆಯ ಸ್ಥಾನದಲ್ಲಿದೆ. ಭಾರತ 37 ಶತಕೋಟಿ ಡಾಲರ್ ರಫ್ತಿನೊಂದಿಗೆ 5ನೇ ಸ್ಥಾನದಲ್ಲಿದೆ. 160 ಕೋಟಿಯಷ್ಟು ಬೃಹತ್ ಜನಸಮುದಾಯಕ್ಕೆ ವಸ್ತ್ರ ಒದಗಿಸುವುದಲ್ಲದೇ ವಿಶ್ವದ ಇತರ ಎಲ್ಲ ದೇಶಗಳಿಗೆ ತನ್ನ ವಸ್ತ್ರ ಉತ್ಪಾದನೆಯನ್ನು ಚೀನಾ ರಫ್ತು ಮಾಡುತ್ತಿದೆ. 2021ರ ವೇಳೆಗೆ ಭಾರತ ತನ್ನ ಜವಳಿ ಉದ್ಯಮದ ರಫ್ತಿನ ಮೌಲ್ಯವನ್ನು 82 ಶತಕೋಟಿ ಡಾಲರ್‌ಗಳನ್ನಾಗಿಸುವ ಯೋಜನೆ ಹಾಕಿಕೊಂಡಿದೆ.

ರಫ್ತಿನ ಪ್ರಮಾಣದಿಂದ ವಿಶ್ವದಲ್ಲಿ ಎಂಟನೇ ಸ್ಥಾನದಲ್ಲಿರುವ ಅಮೆರಿಕ ಉತ್ಪಾದನೆ ಮಾಡುವ ಬಟ್ಟೆ ಹೆಚ್ಚಾಗಿ ಸಮವಸ್ತ್ರ, ಔದ್ಯೋಗಿಕ ವಾತಾವರಣ




